ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.10/2025

ಚಾಸಾ:1 ಫ್ರಾಸಾ:1

ದಿನಾಂಕಃ 05.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಇಮ್ರಾನ್ |
| ತಂದೆಯ ಹೆಸರು- | ಅಮಾನುಲ್ಲಾ |
| ವಯಸ್ಸು – | 34 ವರ್ಷ |
| ಉದ್ಯೋಗ- | ಖಾಸಗಿ ಕೆಲಸ |
| ವಾಸ- | ಕೆಜಿಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನ್ಯಾಯಾಲಯದ ಮುಂದೆ ಇರುವ 2 ರಿಂದ 5 ಮತ್ತು 8 ರಿಂದ 10 ಆರೋಪಿತರು ನನಗೆ ಗೊತ್ತು. ಆರೋಪಿ 1, 6, 7 ಮತ್ತು 11 ರವರೂ ಕೂಡ ನನಗೆ ಗೊತ್ತು. ದಿನಾಂಕ 14.09.2024 ರಂದು ರಾತ್ರಿ 9.30 ಗಂಟೆಯಲ್ಲಿ ಅಮಾನುಲ್ಲಾ ಎಂಬುವವರು ನನಗೆ ದೂರವಾಣಿ ಕರೆ ಮಾಡಿ ಅವರ ಮಗನಿಗೆ ಯಾರೋ ಹೊಡೆದಿರುತ್ತಾರೆ ಆಸ್ಪತ್ರೆಯಲ್ಲಿ ಇದ್ದಾನೆ ಎಂದು ನನಗೆ ತಿಳಿಸಿದರು. ನಂತರದಲ್ಲಿ ನಾನು ಅವರ ಮಗನನ್ನು ನೋಡಲು ರಾಬರ್ಟ್ ಸನ್ ಪೇಟೆಯ ಸಾರ್ವಜನಿಕ ಆಸ್ಪತ್ರೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಸದರಿ ಆಸ್ಪತ್ರೆಯ ಮುಖ್ಯ ಗೇಟಿನ ಬಳಿ ಬೆಳಿಗ್ಗೆ10.45 ಗಂಟೆ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಮತ್ತು ಉಳಿದ ಆರೋಪಿತರೂ ಕೂಡ ಇದ್ದರು. ಆ ಸಮಯದಲ್ಲಿ 1 ನೇ ಆರೋಪಿ ಉಳಿದ ಆರೋಪಿತರಿಗೆ ನನ್ನನ್ನು ಹಿಡಿದು ಹೊಡೆಯಲು ಹೇಳಿದ ಮೇರೆಗೆ ಎಲ್ಲರೂ ಸೇರಿಕೊಂಡು ನನಗೆ ಹೊಡೆದಿರುತ್ತಾರೆ. 1 ನೇ ಆರೋಪಿ ಜಾನ್ಸ್ ಮಾರೋ ಜಾನ್ಸ್ ಮಾರೋ ಎಂದು ಹೇಳಿರುತ್ತಾರೆ. ಆರೋಪಿತರೆಲ್ಲರೂ ಸೇರಿ ಗುಂಪು ಕಟ್ಟಿಕೊಂಡು ಮೊದಲಿಗೆ 3 ನೇ ಆರೋಪಿ ನನ್ನ ಕಪಾಳಕ್ಕೆ ಹೊಡೆದಿರುತ್ತಾನೆ, ಆಗ ನಾನು ಕೆಳಗೆ ಬಿದ್ದಿದ್ದುತ್ತೇನೆ. ನಂತರದಲ್ಲಿ ಎಲ್ಲಾ ಆರೋಪಿತರು ಸೇರಿಕೊಂಡು ಕೈ ಮತ್ತು ಕಾಲುಗಳಿಂದ ಹೊಡೆದು ಒದ್ದಿರುತ್ತಾರೆ. ನನ್ನ ಜೊತೆ ಇದ್ದಂತಹ ಚಾಸಾ-2 ಮತ್ತು 3 ರವರು ನನ್ನನ್ನು ಅಲ್ಲಿಯೇ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ನಾನು ಚಿಕಿತ್ಸೆ ಪಡೆದುಕೊಳ್ಳುವ ಸಮಯದಲ್ಲಿ ಪೋಲೀಸಿನವರು ಭೇಟಿ ನೀಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ಹೇಳಿಕೆ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. 1 ಮತ್ತು 3 ನೇ ಆರೋಪಿತರು ನನ್ನ ಕಪಾಳಕ್ಕೆ ಹೊಡೆದ ಕಾರಣದಿಂದ ನನ್ನ ಎಡಭಾಗದ ಕೆಳಗೆ ಇರುವ 2 ಹಲ್ಲು ಮುರಿದು ಹೋಗಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ ಎಂದು ಹೇಳಿ ಸಾಕ್ಷಿಗೆ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

2. ನಾನು ನನ್ನ ಹೇಳಿಕೆಯಲ್ಲಿ **3** ನೇ ಆರೋಪಿಯು ತನ್ನ ಕೈಯನ್ನು ಮುಷ್ಟಿ ಮಾಡಿ ನನ್ನ ಎಡಕೆನ್ನೆ ಮತ್ತು ತುಟಿಗೆ ಗುದ್ದಿರುತ್ತಾನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಅದೇ ರೀತಿ ಎಲ್ಲಾ ಆರೋಪಿತರು ಸೇರಿಕೊಂಡು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

3. ಚಾಸಾ-3 ರವರು ನನ್ನ ತಂಗಿಯ ಗಂಡ ಎಂದರೆ ಸರಿ. ಅದೇ ರೀತಿ ಚಾಸಾ-2 ರವರು ನನ್ನ ಬಾಮೈದಾ ಎಂದರೆ ಸುಳ್ಳು. ಚಾಸಾ-4 ರವರು ನನ್ನ ಸ್ನೇಹಿತರು ಎಂದರೆ ಸುಳ್ಳು. ಸೆಪ್ಟೆಂಬರ್ 2024 ರಲ್ಲಿ ಯೂತ್ ಕಾಂಗ್ರೆಸ್ ಅಧಕ್ಷರ ಸ್ಥಾನಕ್ಕೆ ಚುನಾವಣೆ ನಡೆದಿರುತ್ತದೆ ಎಂದರೆ ಸರಿ. ನಮ್ಮ ವಿರೋಧ ಗುಂಪಿನಲ್ಲಿ ಬೇತಮಂಗಲ ಸಕ್ಲೈನ್ ಎಂಬುವವರು ಚುನಾವಣೆಗೆ ಸ್ಪರ್ಧೆಯಾಗಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಬೇತಮಂಗಲದ ಸಕ್ಲೈನ್ ಎಂಬುವವರು ಆರೋಪಿತರ ಗುಂಪಿನ ಬೆಂಬಲದಿಂದ ಚುನಾವಣೆಯಲ್ಲಿ ಗೆದ್ದಿರುತ್ತಾರೆ ಎಂದರೆ ಸುಳ್ಳು. ಆದರೆ ಸದರಿಯವರು ಚುನಾವಣೆಯಲ್ಲಿ ಗೆದ್ದಿರುತ್ತಾರೆ. ಆರೋಪಿತರು ನನ್ನ ಜೊತೆ ಬಂದು ಚುನಾವಣೆ ಪ್ರಚಾರಕ್ಕೆ ಭಾಗವಹಿಸಿರುವುದಿಲ್ಲ. ಆರೋಪಿತರು ಸಕ್ಲೈನ್ ರವರ ಪರವಾಗಿ ಚುನಾವಣಾ ಪ್ರಚಾರಕ್ಕೆ ಭಾಗವಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನಮ್ಮ ಗುಂಪಿನವರು ಆರೋಪಿತರು ನಮಗೆ ಚುನಾವಣೆ ಪ್ರಚಾರಕ್ಕೆ ಬಂಬಲ ನೀಡಿರುವುದಿಲ್ಲ ಎಂದು 1 ನೇ ಆರೋಪಿಯ ತಮ್ಮನಾದ ಇರ್ಫಾನ್ ರವರಿಗೆ ಹಲ್ಲೆ ಮಾಡಿರುತ್ತೇನೆ ಎಂದರೆ ಸುಳ್ಳು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆ್ಯಂಡರ್ ಸನ್ ಪೇಟೆ ಪೋಲೀಸ್ ಠಾಣೆಯಲ್ಲಿ ಸಿ.ಸಿ.ನಂ.6748/2025 ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಇರ್ಫಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ನಾನು ಹೋಗಿ ನೋಡಿರುವುದಿಲ್ಲ ಆದರೆ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಇರ್ಫಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ವಿಷಯ ತಿಳಿದುಕೊಂಡ ಕೂಡಲೇ ನಾನೂ ಕೂಡ ಆಸ್ಪತ್ರೆಗೆ ಹೋಗಿ ಸುಮ್ಮನೆ ದಾಖಲಾಗಿರುತ್ತೇನೆ ಎಂದರೆ ಸುಳ್ಳು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನ್ನ ಮುರಿದ 2 ದವಡೆ ಹಲ್ಲುಗಳನ್ನು ಪೋಲೀಸಿನವರಿಗೆ ಕೊಟ್ಟಿರುವುದಿಲ್ಲ. ನಾನು 2 ಕೃತಕ ದವಡೆ ಹಲ್ಲುಗಳನ್ನು ಹಾಕಿಸಿಕೊಂಡಿರುತ್ತೇನೆ. ನಾನು ಯಾವುದೇ 2 ಕೃತಕ ಹಲ್ಲುಗಳನ್ನು ಹಾಕಿಸಿಕೊಂಡಿರುವುದಿಲ್ಲ

ಎಂದರೆ ಸುಳ್ಳು. ನಾನು ನನ್ನ ದೂರಿನಲ್ಲಿ ಅಥವಾ ಹೇಳಿಕೆಯಲ್ಲಿ ನನ್ನ 2 ದವಡೆ ಹಲ್ಲು ಮುರಿದ ವಿಷಯವನ್ನು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನನಗೆ ಮಾತನಾಡಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಿಪಿ–1 ರಲ್ಲಿ ತಿಳಿಸಿರುವ ವಿಷಯ ನನಗೆ ಗೊತ್ತಿದ್ದೆ. ನಿಪಿ–1 ವನ್ನು ಪೋಲೀಸಿನವರು ಬರೆದಿರುತ್ತಾರೆ. ನಿಪಿ–1 ಹೇಳಿಕೆಯನ್ನು ಪೋಲೀಸಿನವರು ಬರೆಯುವಾಗ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನಾನು ಮತ್ತು ನಮ್ಮ ಕುಟುಂಬದವರು ಯಾವುದೇ ಘಟನೆ ನಡೆಯದೇ ಇದ್ದರೂ ಕೂಡ ಎಲ್ಲಿ ಆರೋಪಿತರು ನಮ್ಮ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತಾರೋ ಎಂದು ಹೇಳಿ ಮುಂಚಿತವಾಗಿ ನಾವು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

4. ಆಸ್ಪತ್ರೆಯ ಒಳಾಂಗಣದಲ್ಲಿ ಹೊರಠಾಣೆ ಇದೆ. ಅಲ್ಲಿ ಯಾವಾಗಲೂ ಪೋಲೀಸಿನವರು ಇರುತ್ತಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಯಾರಾದರೂ ಜೋರಾಗಿ ಮಾತನಾಡುತ್ತಿದ್ದಾರೆ ಅಥವಾ ಜನ ಸೇರಿದರೆ ಕೂಡಲೇ ಪೋಲೀಸಿನವರು ಬರುತ್ತಾರೆ ಎಂದರೆ ಸುಳ್ಳು. ಆಸ್ಪತ್ರೆಯಿಂದ ರಾಬರ್ಟ್ ಸನ್ ಪೇಟೆ ಪೋಲೀಸ್ ಠಾಣೆಗೆ ನಡೆದುಕೊಂಡು ಹೋದರೆ 2 ನಿಮಿಷ ಆಗುತ್ತದೆ ಎಂದರೆ ಸರಿ. ಚಾಸಾ–2 ರಿಂದ 4 ರವರು ಬೇರೆ ಕಡೆ ವಾಸಿಸುತ್ತಿದ್ದಾರೆ ಎಂದರೆ ಸರಿ. ಚಾಸಾ–2 ರಿಂದ 4 ರವರಿಗೆ ಆಸ್ಪತ್ರೆಯಲ್ಲಿ ಬೇರೆ ಯಾವುದೇ ಕೆಲಸ ಇರಲಿಲ್ಲ ಎಂದರೆ ಸರಿ.

5. ನಾನು ಹೇಳಿದ ಹಾಗೆ ಆರೋಪಿತರು ನನಗೆ ಮುಷ್ಟಿ ಮಾಡಿ ಕಪಾಳಕ್ಕೆ ಹೊಡೆದಿರುವುದಿಲ್ಲ ಮತ್ತು ಮೈ ಕೈಗೆ ಹೊಡೆದು ಒದ್ದಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸುಳ್ಳು. ನಾನು ಇರ್ಫಾನ್ ರವರ ಮೇಲೆ ಹಲ್ಲೆ ಮಾಡಿ ಅವರಿಗೆ ಹೊಡೆದು ಗಲಾಟೆಯಲ್ಲಿ ಭಾಗವಹಿಸಿ ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಸುಳ್ಳು ದೂರನ್ನು ದಾಖಲಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಜಯಲಕ್ಷ್ಮೀ ಎನ್. ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್